# ಮಳೆ ಹನಿಗಳೊಂದಿಗೆ ಬಾಲಿವುಡ್ ಕಹಾನಿ



> ಮಳೆಗೂ ಪ್ರೇಮಿಗಳಿಗೂ ಬಹಳ ಹತ್ತಿರದ ನಂಟು. ಸಣ್ಣ ಚಳಿಯೊಂದಿಗೆ ಸೋನೆ ಸುರಿಯುವಾಗ ಜೋಡಿ ಹೃದಯಗಳು ಕೈ ಕೈ ಹಿಡಿದು ನಡೆದರೆ ಸ್ವರ್ಗವೇ ಭುವಿಗೆ ಇಳಿದಂತೆ. ಇದೇ ಕಾರಣಕ್ಕೆ ಸಿನಿಮಾಗಳಲ್ಲೂ ಮಳೆ ಹಾಡುಗಳು ಕಾಯಂ.

■ ಸವಿತಾ ಹುನ್ನೂರ

'ರಿಮ್ ಜಿಮ್ ಗೀರೆ ಸಾವನ್ ಸುಲಗ್ ಸುಲಗ್ ಜಾಯೆ ಮನ್ ಬೀಗಿ ಆಜ್ ಇಸ್ ಜೀವನ್ ಮೇ ಲಗಿ ಕೈಸೆ ಯೇ ಅಗನ್ss…', ಮಳೆಗಾಲ ಬಂತೆಂದರೆ ಸಾಕು, ಇಬ್ಬರು ಪ್ರೇಮಿಗಳು ಮಳೆಯಲ್ಲಿ ಮುಂಬೈನ ಮರೀನ್ ಡ್ರೈವ್ ಕಡಲ ತಟದಲ್ಲಿ ಜಗತ್ತನ್ನು ಮರೆತು ನಡೆಯುತ್ತಿರುವ 'ಮಂಜಿಲ್' ಚಲನಚಿತ್ರದ ಈ ಗೀತೆ ನೆನಪಾಗುವುದು.

ಮಳೆಗಾಲ ಯಾವ ಪ್ರೇಮಿಗೆ ಇಷ್ಟವಿಲ್ಲ ಹೇಳಿ?

ನಿಜ ಹೇಳಬೇಕೆಂದರೆ ಸಿನಿಮಾಗಳಲ್ಲಿ ಬಂದಷ್ಟು ಮಳೆ ನಿಜವಾಗಿಯೇನಾದರೂ ಬಂದಿದ್ದರೆ ಬರಗಾಲವೇ ಇರುತ್ತಿರಲಿಲ್ಲವೇನೋ?

ಮಳೆಗೂ ಕಾವ್ಯಲೋಕಕ್ಕೂ ಹತ್ತಿರದ ನಂಟು. ಪ್ರೇಮಿಗಳಿಗಂತೂ ಮಳೆಯ ಮೋಹ ಮತ್ತೂ ಜಾಸ್ತಿ. ಸಣ್ಣ ಚಳಿಯೊಂದಿಗೆ ಸೋನೆ ಸುರಿಯುವಾಗ ಜೋಡಿ ಹೃದಯಗಳು ಕೈ ಕೈ ಹಿಡಿದು ನಡೆದರೆ ಸ್ವರ್ಗವೇ ಬುವಿಗೆ ಇಳಿದಂತೆ ಅನಿಸದಿರದು. ಈ ಕಾರಣಕ್ಕೋ ಏನೋ ಸಿನಿಮಾ ಹಾಡುಗಳಲ್ಲಿ ಮಳೆಯದ್ದು ಪ್ರಧಾನ ಪಾತ್ರ. ಮಳೆ ಪಾತ್ರದ ಕೆಲವು ಹನಿಗಳು ಇಲ್ಲಿ ತೊಟ್ಟಿಕ್ಕಿವೆ… ಒಂದು ಹೆಜ್ಜೆ ಮುಂದೆ ಇಟ್ಟು ನೆನೆಯಿರಿ…

ರಾಜ್‌ಕಪೂರ್ ಚಿತ್ರಗಳಲ್ಲಿ ಮಳೆ ಸಾಮಾನ್ಯವಾಗಿ ಇದ್ದೇ ಇರುತ್ತಿತ್ತು. ಚಿತ್ರದ ಹೆಸರೇ 'ಬರಸಾತ್'. ಈ ಸಿನಿಮಾದಲ್ಲಿ 'ಬರಸಾತ್ ಮೇ ಹಮ್ ಸೇ ಮಿಲೇ ತುಮ್ ಸಜನ್ ತುಮಸೇ ಮಿಲೇ ಹಮ್' ಎಂಬ ಹಾಡು ಬಲು ಪ್ರಸಿದ್ಧ. 'ಶ್ರೀ 420'ನ 'ಪ್ಯಾರ್ ಹುವಾ ಇಕರಾರ್ ಹುವಾ ಹೈ…' ಬಾಲಿವುಡ್‌ನ ಬಹು ಜನಪ್ರಿಯ ಮಳೆಗೀತೆ. ರಾಜ್‌ಕಪೂರ್ ಮತ್ತು ನರ್ಗೀಸ್ ಮಳೆಯಲ್ಲಿ ಕುಣಿದು ಕುಪ್ಪಳಿಸಿ, ಒಂದೇ ಛತ್ರಿಯಲ್ಲಿ ಒಬ್ಬರನ್ನೊಬ್ಬರು ಕಣ್ತುಂಬಿಕೊಳ್ಳುವ ಚಿತ್ರ ಹಿಂದಿ ಚಿತ್ರರಂಗದ ಸುಂದರ ಕ್ಷಣಗಳಲ್ಲಿ ಒಂದು. 'ಚಲ್ತಿ ಕಾ ನಾಮ್ ಗಾಡಿ' (1958) ಚಿತ್ರದ 'ಏಕ್ ಲಡಕಿ ಭೀಗಿ ಭಾಗಿಸಿ ಯ' ಮಳೆ ಹಾಡಿನಲ್ಲಿ ಗ್ಯಾರೇಜ್‌ಗೆ ಕಾಲಿಟ್ಟ ಮಧುಬಾಲರನ್ನು ಯಾರು ಮರೆಯಲು ಸಾಧ್ಯ? ಕಿಶೋರ್ ಕುಮಾರ್ ಅವರನ್ನು ಬಹುಮುಖ ಗಾಯಕ ಎಂದು ದೃಢವಾಗಿ ಸ್ಥಾಪಿಸಿದ ಚಲನಚಿತ್ರಗಳಲ್ಲಿ ಇದೂ ಒಂದು.



'ಆರಾಧನಾ' (1969) ಚಿತ್ರದಲ್ಲಿ 'ರೂಪ್ ತೆರಾ ಮಸ್ತಾನಾ' ಮಳೆ ಹಾಡು ಜಗತ್ಪ್ರಸಿದ್ಧ. ರಾಜೇಶ್ ಖನ್ನಾ ಅವರನ್ನು ಸೂಪರ್ ಸ್ಟಾರ್‌ಗೆ ಏರಿಸಿದ ಹಾಡುಗಳಲ್ಲಿ ಒಂದು.

'ಮಿ. ಇಂಡಿಯಾ' ಸಿನಿಮಾದ 'ಕಾಂಟೆ ನಹಿ ಕಟತೆ ಹೈ ದಿನ್ ಯೆ ರಾತ್' ಹಾಡಿನಲ್ಲಿ ಹಸಿರು ಸೀರೆಯುಟ್ಟ ಶ್ರೀದೇವಿ ಅವರದು ಮಳೆ ಹನಿಗಳನ್ನೂ ಬಿಸಿ ಮಾಡುವ ಮಾದಕತೆ. 'ಟಿಪ್ ಟಿಪ್ ಬರಸಾ ಪಾನಿ' ಮೊಹರಾ ಚಿತ್ರದಲ್ಲಿ ಮಳೆದನಿಯು ರವೀನಾ ಟಂಡನ್ ಸೌಂದರ್ಯಕ್ಕಿಂತ ದೊಡ್ಡದು. 'ಭೀಗಿ ಭೀಗಿ ರಾತೊಂಮೆ… ಐಸೆ ಬರ್ಸಾಂತೊಮೆ' ಛಾವಣಿ ಮೇಲಿನ ಪ್ರೇಮಗೀತೆಗೆ ಸಲಾಂ. 'ಝಿಲ್ ಮಿಲ್ ಸಿತಾರೋಂಕಾ ಆಂಗನ್ ಹೋಗಾ' ಜೀವನ ಮೃತ್ಯು ಧರ್ಮೇಂದ್ರ–ರಾಖಿಯ ಮೇಲೆ ಚಿತ್ರೀಕರಿಸಿದ ಹಾಡು ಪ್ರೇಮಿಗಳ ಹಾಡಾಯಿತು. 'ನಮಕ್ ಹಲಾಲ್'ದ ಮಳೆಯು 'ಆಜ್ ರಪಟ್ ಜಾಯೇ ತೋ ಹಮೇ ನಾ ಉಠಯ್ಯೋ' ಹಾಡನ್ನು ಹಿಟ್ ಮಾಡಿದ ಕತೆಯೂ ಇದೆ.

ಮಳೆ ಬರೀ ಪ್ರೇಮದ ಸಂಕೇತವಲ್ಲದೆ ವಿರಹದ ಸಂಕೇತವೂ ಆಗಿದೆ. 'ಫರಕ್'ದಲ್ಲಿ ಅಭಿನೇತ್ರಿ ಸಾಧನಾ ವಿರಹದಿಂದ ಮಳೆಯಲ್ಲಿ 'ಓ ಸಜನಾ ಬರಖಾ ಬಹಾರ್ ಆಯಿ' ಎಂದು ಹಾಡುತ್ತಾಳೆ.

ಅನೇಕ ಚಿತ್ರಗಳ ಹೆಸರುಗಳು ಮಳೆಯನ್ನೇ ಹೊಂದಿವೆ. ಸಾವನ್ ಭಾದೋ, ಸಾವನ್ ಆಯಾ ಝೂಮಕೆ, ಸಾವನ್ ಕಿ ಘಟಾ, ಬರಸಾತ್, ಬರಸಾತ್ ಕಿ ರಾತ್, ಬರಸಾತ್ ಕಿ ಏಕ್ ರಾತ್, ಸಾವನ್ ಆಯಾ ರೇ, ಸೋಲಾ ಸಾವನ್… ಹೀಗೆ ಮಳೆಯು ಬಾಲಿವುಡ್‌ನಲ್ಲಿ ತನ್ನ ಛಾಪು ಮೂಡಿಸಿದೆ. ■